## ಆನಂದ್ ಋಗ್ವೇದಿ

ಕತೆ, ಕವಿತೆ, ಪ್ರಬಂಧ, ವಿಮರ್ಶೆ, ನಾಟಕ, ಸಂಶೋಧನೆಯ ಕ್ಷೇತ್ರಗಳಲ್ಲಿ ಸದಾ ತೊಡಗಿಸಿಕೊಂಡಿರುವ ಆನಂದ ಋಗ್ವೇದಿ ಈ ತನಕ ಏಳು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಜನ್ನ ಮತ್ತು ಅನೂಹ್ಯ ಸಾಧ್ಯತೆ', 'ಮತ್ತೊಮ್ಮೆ ನಕ್ಕ ಬುದ್ಧ', 'ಕಥಾಸ್ವರೂಪ', 'ಊರ್ಮಿಳಾ', 'ಅನುಭವದ ಅಮೃತತ್ವ', 'ನಿನ್ನ ನೆನಪಿಗೊಂದು ನವಿಲುಗರಿ' ಅವರ ಕೆಲವು ಪ್ರಕಟಿತ ಪುಸ್ತಕಗಳು. ವಿಜ್ಞಾನದಲ್ಲಿ ಪದವಿ, ಕನ್ನಡದಲ್ಲಿ ಸ್ನಾತಕೋತ್ತರ ಪದವಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್. ಡಿ. ಪದವಿ ಪಡೆದಿದ್ದಾರೆ. ಜಿಲ್ಲಾ ತರಬೇತಿ ಕೇಂದ್ರ ಮತ್ತು ಕನ್ನಡ ಮತ್ತು ಸಂಸ್ಕೃತಿ



ಇಲಾಖೆಗೆ ಸಂಪನ್ಮೂಲ ವ್ಯಕ್ತಿಯಾಗಿ ಆಡಳಿತ ಕನ್ನಡ ಮತ್ತು ಸೇವಾ ನಿಯಮಗಳ ಕುರಿತು ನೂರಾರು ತರಬೇತಿ ಉಪನ್ಯಾಸಗಳನ್ನು ನೀಡಿದ್ದಾರೆ. ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಸಹಾಯಕ ಆಡಳಿತ ಅಧಿಕಾರಿ.

ಕನಸು, ಕಾಮನೆ, ಅದೂ ಹೋಗಲಿ ಒಂದೇ ಒಂದು ವಿಪ್ಲವವೂ ಇಲ್ಲದೇ ಬದುಕಿದ್ದೀವಲ್ಲಾ...' ಎಂದು ಕೂಗಿದಂತೆ ಗರುಡನಿಗೆ ಕೇಳಿಸಿತು.

ನನ್ನ ಮುತ್ತಜ್ಜನ ಕಾಲದಲ್ಲಿ ಜಮೀನ್ದಾರನ ಉಪಟಳವಿತ್ತು. ಹೈದರಾಬಾದ್‌ನ ನಿಜಾಮನ ಆಡಳಿತದಲ್ಲಿದ್ದ ಆ ಜಮೀನ್ದಾರ ತನ್ನ ಮುಖ್ಯ ಕರಣಿಕ ನನ್ನ ಮುತ್ತಜ್ಜನಿಗೆ ಮನಸ್ಸೆಲ್ಲ ಬೆಂಕಿ ಹತ್ತಿ ಉರಿಯುವಂತೆ ವರ್ತಿಸಿದ್ದ. ಆ ಮುತ್ತಜ್ಜ ಜಮೀನ್ದಾರನ ವಿರುದ್ಧ ವ್ಯವಸ್ಥಿತ ಸಂಘಟನೆಯೊಂದನ್ನು ರೂಪಿಸಿ ವಿಫಲ ಕ್ರಾಂತಿಯ ಸರದಾರನಾಗಿ ಸೆರೆಸಿಕ್ಕು ನಿಜಾಮನ ಸೈನಿಕರಿಂದ ನೇಣು ಹಾಕಿಸಿಕೊಂಡಂತೆ! ನನ್ನಜ್ಜ ಕಾಂಗ್ರೆಸ್ ಸೇರಿದವ ತನ್ನ ಸಹಜ ಉಪನ್ಯಾಸವನ್ನೇ ಸತ್ಯಾಗ್ರಹದ ಹೆಸರಿನಲ್ಲಿ ನಡೆಸಿ ಪರಮ ಧ್ಯೇಯ ಉದ್ದೇಶಗಳ ಮಹಾನ್ ಗಾಂಧೀವಾದಿ ಎನ್ನಿಸಿಕೊಂಡು ಬದುಕಿದ್ದವ. ಅಪ್ಪನ ಕಾಲಕ್ಕೆ ಕಮ್ಯೂನಿಸಂ ತನ್ನೆರಡು ಕೈಗಳಲ್ಲಿ ಎಲ್ಲ ಯುವಕರನ್ನ ಸೆಳೆದು ಕಾಮ್ರೇಡ್‌ಗಳನ್ನಾಗಿ ಮಾಡಿತ್ತು. ಅಪ್ಪನೋ ಪಕ್ಕದ ಅಮರಾವತಿಯ ಹತ್ತಿಗಿರಣಿಯೊಂದರಲ್ಲಿ ಕಾರ್ಮಿಕ ನಾಯಕನಾಗಿ, ಟ್ರೇಡ್ ಯೂನಿಯನ್ನಿನ ಎಲ್ಲ ನೀತಿಯ ಬದಲು ಆವೇಶವೊಂದನ್ನೇ ಅಸ್ತ್ರವಾಗಿಸಿಕೊಂಡು ಒಂದು ಬೃಹತ್ ಸ್ಟ್ರೈಕಿನ ನಂತರ ನಿಗೂಢವಾಗಿ ಕಣ್ಮರೆಯಾದ. ಅವ ಈಗಲೂ ಬದುಕಿದ್ದರೆ ಎಷ್ಟು ವಯಸ್ಸು ಇರಬಹುದು ಎಂದು ಗರುಡ ಯೋಚಿಸಿದ್ದ. 'ಪ್ರಾಯಶಃ ಅವರೆಲ್ಲರ ಬದುಕಿನಲ್ಲಿ ವೈಯಕ್ತಿಕ ಅರ್ಥವೊಂದು ಇತ್ತೇನೋ... ಆದರೆ ನಾನು... ಅಷ್ಟೇಕೆ ನಾವು...' ಗರುಡ ಪ್ರಶ್ನಿಸಿಕೊಳ್ಳುತ್ತಲೇ ಜಪ ಮುಗಿಸಿದ!

ಕಾಫಿ ಮಾಡಿಕೊಳ್ಳುತ್ತಾ – 'ಅಣ್ಣನ ಹೆಂಡತಿಯ ವರ್ಷಾಂತಿಕವೆಂದು ಊರಿಗೆ ಹೋದ ಅಮ್ಮ ನಾಳೆ, ನಾಡಿದ್ದರಲ್ಲಿ ಬರಬಹುದು' ಎಂದು ತನ್ನಷ್ಟಕ್ಕೇ ಸಮಾಧಾನಪಡಿಸಿಕೊಂಡ ಗರುಡನಿಗೆ ಸಿಗರೇಟೊಂದನ್ನು ಸೇದಬೇಕೆನ್ನಿಸಿತು. ಅಮ್ಮ ಊರಲಿಲ್ಲದುದರಿಂದ ಮನೆಯಲ್ಲೇ ಸೇದಬಹುದು, ಅಲ್ಲದೇ ಈ ದಿನವಿಡೀ ರಜೆಯಿರೋದರಿಂದ ಬೇಕೆನ್ನಿಸಿದಾಗಲೂ ಸಿಗರೇಟ್ ಸೇದಬಹುದು, ಅಡ್ಡಿಲ್ಲ